ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.365/2023**

**PW-4/ CW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಗೋಪಾಲ |
| ತಂದೆ | ಃ | ಮಲ್ಲಪ್ಪ |
| ವಯಸ್ಸು | ಃ | 38 |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಮಸರಕಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **18.07.2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ದಿನಾಂಕ 13.05.2018 ರಂದು ಮಧ್ಯಾಹ್ನ 2 ರಿಂದ 3 ಗಂಟೆಗೆ ಶ್ರೀದೇವಿ ತೋರಿಸಿದ ಘಟನ ಸ್ಥಳದಲ್ಲಿ ಪೋಲಿಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ. ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಹೊಡೆದಾಟದ ಹಿನ್ನಲೆಯಲ್ಲಿ ಮಾಡಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಎಸ್.ಎಂ.ಆರ್ ವಕೀಲರಿಂದ

ನಾನು ಹೊಲದಿಂದ ಬರುತ್ತಿದ್ದಾಗ ಪೋಲಿಸರು ಪಂಚನಾಮೆಗೆ ಕರೆದಿರುತ್ತಾರೆ. ಚಾಸಾ-1 ನನಗೆ ಚಿಕ್ಕಮ್ಮ ಆಗಬೇಕು. ಪಂಚನಾಮೆಯಲ್ಲಿ ಬರೆದ ಸಂಗತಿಗಳನ್ನು ಪೋಲಿಸರು ನನಗೆ ಓದಿ ಹೇಳಿರುತ್ತಾರೆ. ಪಂಚನಾಮೆಗೆ 2 ಸಹಿಗಳನ್ನು ಮಾಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಪೋಲಿಸರು, ನಾನು ಲಿಂಗಯ್ಯ, ಶ್ರೀದೇವಿ, ಮಲ್ಲಯ್ಯ ಮತ್ತು ಶಿವಪ್ಪ ಇದದರು. ನಾವು ಸ್ಥಳಕ್ಕೆ ಹೋದಾಗ 2 ಗಂಟೆ ಆಗಿತ್ತು. ಸ್ಥಳದಲ್ಲಿ 3 ಗಂಟೆ ವರೆಗೆ ಇದ್ದೆವು. ಘಟನ ಸಥಳದ ಚಕ್ಕಬಂದಿ ಹೇಳಲು ಆಗುವುದಿಲ್ಲ. ಘಟನ ಸ್ಥಳ ವಾರ್ಡ ನಂ.4 ಜನತಾ ಕಾಲೋನಿಯಲ್ಲಿ ಬರುತ್ತದೆ. ಚಾಸಾ-1 ಮತ್ತು ಆರೋಪಿತರ ನಡುವೆ ವೈಮನಸ್ಸು ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ

ಕುರಿ ಮತ್ತು ಆಡುಗಳು ಇವೆ ಎಂದರೆ ಸರಿ. ಚಾಸಾ-1 ನನ್ನ ಚಿಕ್ಕಮ್ಮ ಆದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ದೇವದುರ್ಗ.